KA14040016202022

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, 2 ನೇ ನ್ಯಾಯಾಲಯ, ಶಿವಮೊಗ್ಗ.**

**ಉಪಸ್ಥಿತರುಃ- ಶ್ರೀ ಸಿದ್ದರಾಜು ಎನ್.ಕೆ.**

ಬಿ.ಎ., ಎಲ್.ಎಲ್.ಬಿ,

**ಜೆ.ಎಂ.ಎಫ್.ಸಿ. 2 ನೇ ನ್ಯಾಯಾಲಯ, ಶಿವಮೊಗ್ಗ.**

**ಸಿ.ಸಿ.ನಂ.1145/2022**

**ದಿನಾಂಕಃ 29 ನೇ ಜೂನ್, 2026**

ಫಿರ್ಯಾದಿಃ ಸರ್ಕಾರದ ಪರವಾಗಿ ಅಬಕಾರಿ ಪೊಲೀಸ್ ಠಾಣೆ,
ವಲಯ-1, ಶಿವಮೊಗ್ಗ.

**(ಸಹಾಯಕ ಸರ್ಕಾರಿ ಅಭಿಯೋಜಕರು)**

- ವಿರುದ್ಧ-

ಆರೋಪಿತರುಃ ಸಂಜುನಾಯ್ಕ ಬಿನ್ ಮೀಟ್ಯಾನಾಯ್ಕ ,
ವಾಸಃ ದುಮ್ಮಳ್ಳಿ ಗ್ರಾಮ, ಅಂತರಘಟ್ಟಮ್ಮ
ದೇವಸ್ಥಾನದ ಹತ್ತಿರ, ನಿಧಿಗೆ ಅಂಚೆ,
ಶಿವಮೊಗ್ಗ ತಾಲ್ಲೂಕು.

**(ಆರೋಪಿ ಪರ ಶ್ರೀ ಹೆಚ್ ಎಂ ಜೆ, ವಕೀಲರು)**

| | |
|---|---|
| 1. ಕೃತ್ಯ ಎಸಗಿದ ದಿನಾಂಕ | 22.04.2022 |
| 2. ಅಪರಾಧ ವರದಿ ಮಾಡಿದ ದಿನಾಂಕ | 22.04.2022 |
| 3.ಫಿರ್ಯಾದುದಾರ/ಬಾತ್ಮಿದಾರರ ಹೆಸರು | ಮಲ್ಲಿಕಾರ್ಜುನ |
| 4. ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | 19.12.2025 |

| | |
|---|---|
| 5. ಸಾಕ್ಷಿದಾರರ ವಿಚಾರಣೆ ಕೊನೆಗೊಂಡ ದಿನಾಂಕ | 13.02.2025 |
| 6. ದೂಷಿಸಲಾದ ಆರೋಪಗಳು | ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ). |
| 7. ನ್ಯಾಯಾಧೀಶರ ಅಭಿಪ್ರಾಯ | ಅಂತಿಮ ಆದೇಶದಂತೆ. |

## ತೀರ್ಪು

ಶಿವಮೊಗ್ಗ ನಗರ ಅಬಕಾರಿ ಪೊಲೀಸ್ ಠಾಣೆಯ ವಲಯ-1, ಆರಕ್ಷಕ ಉಪ ನಿರೀಕ್ಷಕರು ಆರೋಪಿ ವಿರುದ್ಧ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ)ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ಆರೋಪಿಸಿ ಈ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-**

ದಿನಾಂಕ 22.04.2022 ರಂದು ಬೆಳಿಗ್ಗೆ 07.00 ಗಂಟೆ ಸಮಯದಲ್ಲಿ ಶಿವಮೊಗ್ಗ ತಾಲ್ಲೂಕು ದುಮ್ಮಳ್ಳಿ ಗ್ರಾಮದ ವಾಸಿಯಾದ ಆರೋಪಿಯು ಸೋಗಾನೆ ಗ್ರಾಮದ ವಿಮಾನ ನಿಲ್ದಾಣ ರಸ್ತೆಯಲ್ಲಿ ತನಗೆ ಸೇರಿದ ತಾತ್ಕಾಲಿಕವಾಗಿ ಶೆಡ್ ರೂಪದ ಕಿರಾಣಿ ಅಂಗಡಿಯ ಸ್ವಾಧೀನ ಹೊಂದಿ, ಸದರಿ ಅಂಗಡಿಯಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಕಾನೂನು ಬಾಹಿರವಾಗಿ ಅಕ್ರಮವಾಗಿ 90 ಮಿಲಿಯ ಸಾಮರ್ಥ್ಯದ ಹೇವಾರ್ಡ್ಸ್ ಚಿಯರಸ್ ವಿಸ್ಕಿಯ 39 ಟೆಟ್ರಾ ಪ್ಯಾಕೆಟ್‌ಗಳು, 180 ಮಿಲಿಯ ಸಾಮರ್ಥ್ಯದ ಬ್ಯಾಗ್ ಪೈಪರ್ ವಿಸ್ಕಿಯ 05 ಟೆಟ್ರಾ ಪ್ಯಾಕೆಟ್ ಗಳು, 180 ಮಿಲಿಯ ಸಾಮರ್ಥ್ಯದ ಆಫೀಸರ್ಸ್ ಚಾಯ್ಸ್ ವಿಸ್ಕಿಯ 1 ಟೆಟ್ರಾ ಪ್ಯಾಕೆಟ್, 180 ಮಿಲಿಯ ಸಾಮರ್ಥ್ಯದ ಡಿ ಎಸ್ ಬಿ ವಿಸ್ಕಿಯ 02 ಬಾಟಲಿ ಹಾಗೂ 330 ಮಿಲಿಯ ಸಾಮರ್ಥ್ಯದ ಯು ಬಿ ಎಕ್ಸ್ ಪೋರ್ಟ್ ಸ್ಟ್ರಾಂಗ್ ಬಿಯರ್ 16 ಬಾಟಲಿಗಳು ಒಟ್ಟು 4.950 ಲೀಟರ್ ನಷ್ಟು ಮದ್ಯವನ್ನು ದಾಸ್ತನು

ಹೊಂದಿರುತ್ತಾರೆ. ನಂತರ ಅವುಗಳನ್ನು ಜಪ್ತಿ ಮಾಡಿ, ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿ, ನಂತರ ಸದರಿ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಸೀಲ್ ಮಾಡಲಾಯಿತು, ಸದರಿ ಆರೋಪಿಯ ವಿರುದ್ಧ ತನಿಖಾ ಸಮಯದಲ್ಲಿ ಆರೋಪವು ದೃಢಪಟ್ಟ ನಂತರ ಆರೋಪಿ, ಮುದ್ದೆ ಮಾಲುಗಳು ಹಾಗೂ ವರದಿಯೊಂದಿಗೆ ಚಾಸಾ.1 ರವರು ಅಬಕಾರಿ ಪೊಲೀಸ್ ಠಾಣೆಗೆ ವರದಿ ನೀಡಿರುತ್ತಾರೆ.

3. ಆ ನಂತರ ಆರೋಪಿ ವಿರುದ್ಧ ಅಬಕಾರಿ ಪೋಲೀಸ್ ಠಾಣೆ ಗುನ್ನೆ ಸಂಖ್ಯೆಃ36/2021-2022 ರಲ್ಲಿ ಸ್ವಯಂ ದೂರನ್ನು ದಾಖಲಿಸಿರುತ್ತಾರೆ. ಆ ನಂತರ ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಆರೋಪಿ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 ಮತ್ತು 38(ಎ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ನ್ಯಾಯಾಲಯವು ಆರೋಪಿ ವಿರುದ್ಧ ಸದರಿ ಆರೋಪದ ಮೇಲೆ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿರುತ್ತದೆ. ಆರೋಪಿ ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮಿನು ಪಡೆದು, ಬಿಡುಗಡೆಯಾಗಿರುತ್ತಾರೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಅಡಿಯಲ್ಲಿ ದೋಷಾರೋಪಣ ಪತ್ರದ ಪ್ರತಿಗಳನ್ನು ಒದಗಿಸಲಾಗಿರುತ್ತದೆ. ನಂತರ ಉಭಯೇತರರ ವಾದಗಳನ್ನು ಕೇಳಿ ದೋಷಾರೋಪಣೆ ರೂಪಿಸಿದ್ದು, ಆರೋಪಿ ತನ್ನ ವಿರುದ್ಧ ಮಾಡಲಾಗಿರುವ ದೋಷಾರೋಪಣೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ವಿಚಾರಣೆಯಾಗಲಿ ಎಂದು ಬಯಸಿರುತ್ತಾರೆ. ನಂತರ ಪ್ರಕರಣವನ್ನು ಅಭಿಯೋಜನೆಯ ಸಾಕ್ಷಿ ವಿಚಾರಣೆಗೆ ನಿಗದಿಪಡಿಸಲಾಯಿತು.

5. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು ಒಟ್ಟು 3 ಜನ ಸಾಕ್ಷಿದಾರರನ್ನು ಫ್ರಾಸಾ–1 ರಿಂದ ಫ್ರಾಸಾ–3 ರವರೆಗೆ ವಿಚಾರಣೆಗೆ ಒಳಪಡಿಸಿರುತ್ತಾರೆ ಹಾಗೂ ಒಟ್ಟು 14 ದಸ್ತಾವೇಜುಗಳನ್ನು ನಿಪಿ–1 ರಿಂದ ನಿಪಿ–14 ಎಂದು ಮತ್ತು ಜಪ್ತುಪಡಿಸಿಕೊಂಡ ವಸ್ತುವನ್ನು ಮು.ಮಾ–1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

6. ಅಭಿಯೋಜನೆ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಅಭಿಯೋಜನೆ ಸಾಕ್ಷ್ಯದಲ್ಲಿ ಆರೋಪಿತನ ಅಪರಾಧವನ್ನು ಸೂಚಿಸುವಂತಹ ಹೇಳಿಕೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು. ಆರೋಪಿ ತನ್ನ ವಿರುದ್ಧ ಇರುವ ಸದರಿ ಹೇಳಿಕೆಗಳನ್ನು ಸನ್ನಿವೇಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷಿ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ.

7. ಅಭಿಯೋಜನೆ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿ ಪರ ವಕೀಲರ ವಾದ–ವಿವಾದಗಳನ್ನು ಆಲಿಸಲಾಯಿತು ಮತ್ತು ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಲಾಯಿತು.

8. ಪ್ರಕರಣದ ಮೌಖಿಕ ಸಾಕ್ಷ್ಯ ಮತ್ತು ದಾಖಲಾತಿ ಹಾಗೂ ಸಂದರ್ಭಗಳನ್ನು ಅವಲೋಕಿಸಿದಾಗ ಈ ನ್ಯಾಯಾಲಯದ ನಿರ್ಧರಣೆಗೆ ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

1. ದಿನಾಂಕ 22.04.2022 ರಂದು ಬೆಳಿಗ್ಗೆ 07.00 ಗಂಟೆ ಸಮಯದಲ್ಲಿ ಶಿವಮೊಗ್ಗ ತಾಲ್ಲೂಕು ದುಮ್ಮಳ್ಳಿ ಗ್ರಾಮದ ವಾಸಿಯಾದ ಆರೋಪಿಯು ಸೋಗಾನೆ ಗ್ರಾಮದ ವಿಮಾನ ನಿಲ್ದಾಣ ರಸ್ತೆಯಲ್ಲಿ ತಾತ್ಕಾಲಿಕವಾಗಿ ಶೆಡ್ ರೂಪದ ಕಿರಾಣಿ

ಅಂಗಡಿಯಲ್ಲಿ ಅಕ್ರಮವಾಗಿ 90 ಮಿಲಿಯ ಸಾಮರ್ಥ್ಯದ ಹೇವಾರ್ಡ್ಸ್ ಚಿಯರಸ್ ವಿಸ್ಕಿಯ 39 ಟೆಟ್ರಾ ಪ್ಯಾಕೆಟ್‌ಗಳು, 180 ಮಿಲಿಯ ಸಾಮರ್ಥ್ಯದ ಬ್ಯಾಗ್ ಪೈಪರ್ ವಿಸ್ಕಿಯ 05 ಟೆಟ್ರಾ ಪ್ಯಾಕೆಟ್ ಗಳು, 180 ಮಿಲಿಯ ಸಾಮರ್ಥ್ಯದ ಆಫೀಸರ್ಸ್ ಚಾಯ್ಸ್ ವಿಸ್ಕಿಯ 1 ಟೆಟ್ರಾ ಪ್ಯಾಕೆಟ್, 180 ಮಿಲಿಯ ಸಾಮರ್ಥ್ಯದ ಡಿ ಎಸ್ ಬಿ ವಿಸ್ಕಿಯ 02 ಬಾಟಲಿ ಹಾಗೂ 330 ಮಿಲಿಯ ಸಾಮರ್ಥ್ಯದ ಯು ಬಿ ಎಕ್ಸ್ ಪೋರ್ಟ್ ಸ್ಟ್ರಾಂಗ್ ಬಿಯರ್ 16 ಬಾಟಲಿಗಳು ಒಟ್ಟು 4.950 ಲೀಟರ್ ನಷ್ಟು ಮದ್ಯವನ್ನು ದಾಸ್ತನು ಹೊಂದಿದ್ದು, ಆ ಮೂಲಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ಆರೋಪಿಗೆ ಸೇರಿದ ಶೆಡ್ ರೂಪದ ಕಿರಾಣಿ ಅಂಗಡಿಯನ್ನು ಸ್ವಾಧೀನ ಹೊಂದಿ ಯಾವುದೇ ಪರವಾನಿಗೆ ಇಲ್ಲದೆ ಕಾನೂನು ಬಾಹಿರವಾಗಿ ಮೇಲೆ ಹೇಳಿದ ಮದ್ಯವನ್ನು ಅಕ್ರಮ ದಾಸ್ತಾನು ಹೊಂದಿ ರುತ್ತಾರೆ ಆ ಮೂಲಕ ಅಬಕಾರಿ ಕಾಯ್ದೆ ಕಲಂ 38(ಎ)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

3. ಏನು ಆದೇಶ?

9. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ–1 ಮತ್ತು 2 : ನಕರಾತ್ಮಕವಾಗಿ

ಅಂಶ–3 : ಅಂತಿಮ ಆದೇಶದಂತೆ ಈ ಕೆಳಕಂಡ

ಕಾರಣಗಳಿಗಾಗಿ,

**ಕಾರಣಗಳು**

10. **ಅಂಶ-1 ಮತ್ತು 2**: ಈ ವಿವಾದಾಂಶಗಳು ಒಂದಕ್ಕೊಂದು ಅಂತರಿಕ ಸಂಬಂಧ ಹೊಂದಿರುವುದರಿಂದ ಒಂದು ವಿವಾದಾಂಶದ ಮೇಲಿನ ಚರ್ಚೆಯಲ್ಲಿ ಮತ್ತೊಂದು ವಿವಾದಾಂಶದ ಸಂಗತಿಗಳು ಪುನರಾವರ್ತನೆಯಾಗವುದನ್ನು ತಪ್ಪಿಸುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಅಭಿಯೋಜನೆಯು ಪ್ರಕರಣವನ್ನು ಸಾಬೀತುಪಡಿಸುವ ಸಲುವಾಗಿ ಒಟ್ಟು 3 ಜನ ಸಾಕ್ಷಿದಾರರನ್ನು ಫ್ರಾಸಾ-1 ರಿಂದ 3 ಎಂದು ವಿಚಾರಣೆಗೆ ಒಳಪಡಿಸಿರುತ್ತದೆ. ಅವರಲ್ಲಿ ಅಭಿಯೋಜನೆಯು ದಾಳಿಗೆ ತೆರಳಿದ ಪೊಲೀಸ್ ಅಧಿಕಾರಿಗಳಾದ, ಫ್ರಾಸಾ-1 ಮತ್ತು ಫ್ರಾಸಾ-2 ರವರನ್ನು ವಿಚಾರಣೆಗೆ ಒಳಪಡಿಸಿದಾಗ, ದಿಃ 22.04.2022 ರಂದು ಚಾಸಾ 7 ರವರೊಂದಿಗೆ ನಾನು, ಚಾಸಾ 4 ಮತ್ತು 6 ರವರೊಂದಿಗೆ ಶಿವಮೊಗ್ಗ ತಾ. ಸೋಗಾನೆ ಗ್ರಾಮದಲ್ಲಿ ಗಸ್ತು ನಡೆಸುತ್ತಿರುವಾಗ ಚಾಸಾ 7 ರವರಿಗೆ ದೂರವಾಣಿ ಮೂಲಕ ಭಾತ್ಮಿ ಬಂದಿರುತ್ತದೆ. ಸೋಗಾನೆ ಗ್ರಾಮದಲ್ಲಿ ಸಂಜುನಾಯ್ಕು ಬಿನ್ ಮೀಟ್ಯಾ ನಾಯ್ಕುರವರಿಗೆ ಸೇರಿದ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ತಾವು ಸಿಬ್ಬಂದಿ ಮತ್ತು ಪಂಚರೊಂದಿಗೆ ಕಿರಾಣಿ ಅಂಗಡಿಯ ಬಳಿ ಹೋಗಿ ನೋಡಿದಾಗ ಅಂಗಡಿಯಲ್ಲಿ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ವಿಚಾರಿಸಿ, ಅಂಗಡಿಯನ್ನು ಶೋಧನೆ ಮಾಡುವ ಸಲುವಾಗಿ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡು ಅಂಗ ಶೋಧನೆ ಮಾಡಿಕೊಂಡು ಸದರಿ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ

ಎಡಭಾಗದ ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಮತ್ತು ಬಿಳಿ ಬಣ್ಣದ ಗೊಬ್ಬರ ಚೀಲ ಇರುವುದು ಕಂಡು ಬಂತು. ಅವುಗಳನ್ನು ತೆಗೆದು ನೋಡಲಾಗಿ ರಟ್ಟಿನ ಪೆಟ್ಟಿಗಯಲ್ಲಿ 330 ಎಂ ಎಲ್ ನ ಯುಬಿ ಎಕ್ಸ್ ಪರ್ಟ್ ಸ್ಟ್ರಾಂಗ್ ಬಿಯರ್ ನ 16 ಬಾಟಲಿಗಳು, ಗೊಬ್ಬರದ ಚೀಲದಲ್ಲಿ 90 ಎಂ ಎಲ್ ನ ಹೈವಾರ್ಡ್ಸ್ ಚೇಸ್ ವಿಸ್ಕಿಯ 39 ಟೆಟ್ರಾ ಪ್ಯಾಕೆಟ್ ಗಳು, 180 ಎಂ ಎಲ್ ನ ಬಿ ಪಿ ವಿಸ್ಕಿಯ 5 ಟೆಟ್ರಾ ಪ್ಯಾಕೆಟ್ ಗಳು , 180 ಎಂ ಎಲ್ ನ ಒ ಸಿ ವಿಸ್ಕಿಯ 1 ಟೆಟ್ರಾ ಪ್ಯಾಕೆಟ್ , 180 ಎಂ ಎಲ್ ನ ಡಿ ಎಸ್ ಪಿ ಬ್ಲಾಕ್ ವಿಸ್ಕಿಯ 2 ಬಾಟಲಿಗಳು ಇರುವುದು ಕಂಡುಬಂದಿದ್ದವು. ಸದರಿ ಮಧ್ಯವನ್ನು ದಾಸ್ತಾನು ಮಾಡಲು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಸದರಿ ವ್ಯಕ್ತಿ ಪರವಾನಿಗೆ ಇರುವುದಿಲ್ಲ ಎಂದು ಹೇಳಿರುತ್ತಾನೆ. ನಂತರ ಪಂಚರ ಸಮಕ್ಷಮ ಮಹಜರ್ ಮೂಲಕ ಸ್ಥಳದಲ್ಲಿ ಸಿಕ್ಕ ಬಿಯರ್ ಮತ್ತು ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು 2 ಬಾಕ್ಸ್ ಗಳಲ್ಲಿ ಪ್ರತ್ಯೇಕವಾಗಿ ಹಾಕಿ ರಾಸಾಯನಿಕ ಪರೀಕ್ಷೆಗೆಂದು ಬಿಳಿ ಬಟ್ಟೆಯಲ್ಲಿ ತುಂಬಿ ದಾರದಿಂದ ಕಟ್ಟಿ ಅರಗು ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅದಕ್ಕೆ ಅಂಟಿಸಲಾಯಿತು ಪಂಚನಾಮೆಯನ್ನು ರಾತ್ರಿ 8.15-9.15 ರವರೆಗೆ ಬರೆಯಲಾಯಿತು. ದೊರೆತ ಎಲ್ಲಾ ಮು ಮಾಗಳು ಮತ್ತು ಆರೋಪಿತನೊಂದಿಗೆ ಠಾಣೆಗೆ ಬಂದು ಆರೋಪಿ ವಿರುದ್ಧ ಸ್ವದೂರನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ನಂತರ ಮಾದರಿ ತೆಗೆದ ಮುದ್ದೆಮಾಲುಗಳನ್ನು ಚಾಸಾ-5 ರವರ ಮುಖಾಂತರ ಚಿತ್ರದುರ್ಗ ರಾಸಾಯನಿಕ ಪ್ರಯೋಗಾಲಯಕ್ಕೆ ಮುದ್ದೆಮಾಲುಗಳನ್ನು ಕಳುಹಿಸಿರುತ್ತೇನೆ ಎಂದು ಸಾಕ್ಷಿ ನುಡಿದು ನಿಪಿ-1 ರಿಂದ 9 ದಾಖಲೆಗಳನ್ನು, ಮುದ್ದೆಮಾಲು-1 ಮತ್ತು 2 ಅನ್ನು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

12. ಅಭಿಯೋಜನೆಯು ಪ್ರಾಸಾ–3 ರವರನ್ನು ವಿಚಾರಣೆಗೆ ಒಳಪಡಿಸಿದಾಗ, ಸದರಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿವನ್ನು ನುಡಿದಿರುತ್ತಾರೆ ಹಾಗೂ ಸದರಿರವರು ತನಿಖೆ ಕೈಗೊಂಡು, ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿ ವಿರುದ್ಧ ದೋಷಾರೋಪಣಾ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯವನ್ನು ನುಡಿದು ನಿಪಿ–10 ರಿಂದ 14 ದಾಖಲೆಗಳನ್ನು, ಮುದ್ದೆಮಾಲನ್ನು ನೋಡಿ ಗುರುತಿಸಿರುತ್ತಾರೆ.

13. ಮೇಲ್ಕಂಡ ಸಾಕ್ಷಿದಾರರ ಸಾಕ್ಷ್ಯವನ್ನು ಗಮನಿಸಿದಾಗ, ಇಲಾಖಾ ಸಾಕ್ಷಿದಾರರನ್ನು ಹೊರತುಪಡಿಸಿ ಅಭಿಯೋಜನೆಯು ಸ್ಥಳೀಯ ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ಸಾಕ್ಷ್ಯ ವಿಚಾರಣೆಗೆ ಒಳಪಡಿಸಿರುವುದಿಲ್ಲ. ಅಲ್ಲದೇ ಇಲಾಖಾ ಸಾಕ್ಷಿದಾರರ ಸಾಕ್ಷ್ಯದಲ್ಲಿಯೂ ಹಲವು ವಿರೋಧಾಭಾಸಗಳು ಕಂಡು ಬಂದಿರುತ್ತದೆ. ದಾಳಿ ಮಾಡಿದ ಅಬಕಾರಿ ಅಧಿಕಾರಿಗಳ ಸಾಕ್ಷ್ಯದಿಂದ ಪ್ರಶ್ನಿತಾ ಘಟನಾ ಸ್ಥಳದಲ್ಲಿ ಹಲವಾರು ಮನೆಗಳು ಇದ್ದರೂ ಸಹ ಯಾವ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ, ಪಂಚರನ್ನಾಗಿ ಮಾಡಿರುವುದಿಲ್ಲ ಹಾಗೂ ಸಾಕ್ಷಿದಾರರ ಹೇಳಿಕೆ ಪಡೆಯದೇ ಇರುವುದು ಅನುಮಾನಸ್ಪದವಾಗಿ ಕಂಡು ಬರುತ್ತದೆ ಹಾಗೂ ಅವರ ಹೇಳಿಕೆ ಪಡೆದುಕೊಳ್ಳಲು ತನಿಖಾಧಿಕಾರಿಗೆ ಯಾವ ತೊಂದರೆ ಇತ್ತು ಎನ್ನುವ ಬಗ್ಗೆಯೂ ಸಹ ಅಭಿಯೋಜನೆಯು ಯಾವುದೇ ಸೂಕ್ತ ಮತ್ತು ಸಮಂಜಸವಾದ ವಿವರಗಳನ್ನು ನೀಡಿರುವುದಿಲ್ಲ. ಆದ್ದರಿಂದ ಇಲಾಖಾ ಸಾಕ್ಷಿದಾರರಾದ ಇವರ ನುಡಿ ಸಾಕ್ಷ್ಯಗಳಲ್ಲಿ ಹಲವಾರು ಗೊಂದಲ, ವಿರೋಧಭಾಸಗಳಿದ್ದು, ಅಭಿಯೋಜನೆಯ ಪ್ರಕರಣವು ಸಂಶಯಾಸ್ಪದವಾಗಿರುತ್ತದೆ. ಅಭಿಯೋಜನೆಯು ಹಾಜರುಪಡಿಸಿದ ದಾಖಲೆಗಳನ್ನು ಗಮನಿಸಿದಾಗ, ಮುದ್ದೆಮಾಲುಗಳನ್ನು ದಿನಾಂಕ 22.04.2022 ರಂದು ಅಮಾನತ್ತುಪಡಿಸಿಕೊಂಡಿದ್ದು, ಆದರೆ ಸದರಿ

ಮುದ್ದೆಮಾಲುಗಳನ್ನು ದಿನಾಂಕ 11.05.2022 ರಂದು ತನಿಖಾಧಿಕಾರಿಯವರು ಆರ್.ಎಫ್.ಎಸ್.ಎಲ್ ಚಿತ್ರದುರ್ಗಕ್ಕೆ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದು, ಆದರೆ, ತಡವಾಗಿ ಪರೀಕ್ಷೆಗೆ ಕಳುಹಿಸಿಕೊಡಲು ಕಾರಣ ಏನು ಎಂಬುದನ್ನು ಸಹ ವಿವರಿಸಿರುವುದಿಲ್ಲ. ಇದರಿಂದ ಅಭಿಯೋಜನೆ ಪ್ರಕರಣದ ಮೇಲೆ ನ್ಯಾಯಾಲಯಕ್ಕೆ ಸಂಶಯ ಉಂಟು ಮಾಡುವಂತೆ ಕಂಡು ಬರುತ್ತದೆ. ಪ್ರಕರಣದ ಮುಖ್ಯ ಸಾಕ್ಷಿದಾರರಾದ ಫ್ರಾಸಾ-1 ರಿಂದ 3 ರವರು ಅಭಿಯೇಜನೆಯ ಪ್ರಕರಣವನ್ನು ಬೆಂಬಲಿಸಿ ಸಾಕ್ಷಿ ನುಡಿದಿರುತ್ತಾರೆ. ಆದರೆ, ಫ್ರಾಸಾ-1 ರಿಂದ 3 ರವರು ಅಬಕಾರಿ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳಾಗಿದ್ದು, ಸ್ವತಂತ್ರ ಸಾಕ್ಷಿದಾರರ ನುಡಿ ಸಾಕ್ಷ್ಯದ ಅನುಪಸ್ಥಿತಿಯಲ್ಲಿ ಫ್ರಾಸಾ-1 ರಿಂದ 3 ರವರ ನುಡಿ ಸಾಕ್ಷಿಯು ನಂಬಲಾರ್ಹವಾಗಿರುವುದಿಲ್ಲ.

14. ಮಾದರಿ ದ್ರವ್ಯದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-9 ರಂತೆ ಗುರುತಿಸಿಕೊಳ್ಳಲಾಗಿದೆ. ಸದರಿ ದಾಖಲೆಯ ವಿವರಗಳ ಪ್ರಕಾರ ಮಾದರಿ ದ್ರವ್ಯದಲ್ಲಿ ಮದ್ಯಸಾರದ ಅಂಶವಿರುವುದು ಕಂಡುಬರುತ್ತದೆ. ಆದರೆ ಮಾದರಿ ದ್ರವ್ಯವನ್ನು ಆರೋಪಿಯಿಂದಲೇ ವಶಪಡಿಸಿಕೊಳ್ಳಲಾಗಿದೆ ಎನ್ನುವ ಸಂಗತಿಯನ್ನು ಖಚಿತವಾಗಿ ನಿರೂಪಿಸಲು ಅಭಿಯೋಜನೆ ವಿಫಲವಾಗಿರುವುದರಿಂದ ನಿಪಿ-9 ರ ವಿವರಗಳನ್ನು ಆರೋಪ ನಿರ್ಣಯದಲ್ಲಿ ಪೂರಕ ಸಾಕ್ಷ್ಯವನ್ನಾಗಿ ಬಳಸಿಕೊಳ್ಳಲು ಸಾಧ್ಯವಿರುವುದಿಲ್ಲ. ಸದರಿ ಸಂಗತಿಯು ಅಭಿಯೋಜನೆಯ ನಿಲುವಿನ ಮೇಲೆಯೇ ಸಂಶಯ ಮೂಡಿಸುತ್ತದೆ. ಆದುದರಿಂದ ಪುಷ್ಟೀಕರಿಸಲ್ಪಡದ ಫ್ರಾಸಾ-1 ರಿಂದ 3 ರವರ ಸಾಕ್ಷ್ಯದ ಆಧಾರದಲ್ಲಿ ಆರೋಪಿ ವಶದಿಂದ ಮದ್ಯದ ಪೌಚ್ ಮತ್ತು ಬಿಯರ್ ಬಾಟಲ್ ಗಳನ್ನು ಜಪ್ತುಪಡಿಸಿಕೊಳ್ಳಲಾಗಿದೆ ಎನ್ನುವುದಾಗಿ ಅಭಿಪ್ರಾಯಪಡುವುದು ಅಪಾಯಕಾರಿಯಾಗಿ

ಕಂಡುಬರುತ್ತದೆ. ಹೀಗಾಗಿ ಪ್ರಕರಣದ ಒಟ್ಟಾರೆ ಸಂದರ್ಭಗಳ ಹಿನ್ನೆಲೆಯಲ್ಲಿ ಕೇವಲ ಆರಕ್ಷಕ ಸಾಕ್ಷಿದಾರರ ಸಾಕ್ಷ್ಯವನ್ನು ಆಧಾರಿಸಿ ಆರೋಪಿ ಮತ್ತು ಜಪ್ತುಪಡಿಸಿಕೊಳ್ಳಲಾದ ಮದ್ಯದ ಪೌಚ್ ಮತ್ತು ಬಿಯರ್ ಬಾಟಲ್ ಗಳ ನಡುವಿನ ಸಂಬಂಧ ರುಜುವಾತಾಗಿದೆ ಎಂದು ಅಭಿಪ್ರಾಯಪಡುವುದು ಅಪಾಯಕಾರಿಯಾಗಿ ಕಂಡುಬರುತ್ತದೆ.

15. ಒಟ್ಟಾರೆಯಾಗಿ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಮನಿಸುವಾಗ, ಆರೋಪಿಯು ಆಪಾದಿಸಲಾದ ಕೃತ್ಯವನ್ನು ಎಸಗಿರುತ್ತಾರೆ ಎನ್ನುವ ಸಂಗತಿಯನ್ನು ನಿಸ್ಸಂಶಯವಾಗಿ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ ಎನ್ನುವುದು ಕಂಡು ಬರುತ್ತದೆ. ಆದ್ದರಿಂದ ಸದರಿ ಸಂಶಯದ ಲಾಭವನ್ನು ಆರೋಪಿಯು ಪಡೆಯಲು ಅರ್ಹರಿರುತ್ತಾರೆಂದು ನಿರ್ಧರಿಸಿ, ಈ ಮೇಲಿನ 1 ಮತ್ತು 2 ಅಂಶಗಳನ್ನು ***ನಕಾರಾತ್ಮಕವಾಗಿ*** ಉತ್ತರಿಸಿರುತ್ತೇನೆ.

16. **<u>ಅಂಶಃ 3</u>** ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32, 38(ಎ) ರಡಿಯಲ್ಲಿಯ ಆಪಾದನೆಗಳಿಂದ ಆರೋಪಿಯನ್ನು ನಿರ್ದೋಷಿಯೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆ ಪತ್ರವು ದಂಡ ಪಕ್ರಿಯೆ ಸಂಹಿತೆ ಕಲಂ 437(ಎ) ರಂತೆ 6 ತಿಂಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು.

ಮುದ್ದೆಮಾಲು–1 ರಿಂದ 3 ಅನ್ನು ಅನುಪಯುಕ್ತವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ನನ್ನಿಂದ ತಿದ್ದಲ್ಪಟ್ಟು ನಂತರ ತೆರೆದ ನ್ಯಾಯಾಲಯದಲ್ಲಿ 29 ನೇ ಜೂನ್, 2026 ರಂದು ಉದ್ಘೋಷಿಸಲಾಯಿತು.)

(ಶ್ರೀ ಸಿದ್ದರಾಜು ಎನ್.ಕೆ.)
2 ನೇ ಪ್ರ.ದ.ನ್ಯಾ. ದಂಡಾಧಿಕಾರಿಗಳು, ಶಿವಮೊಗ್ಗ.

## ಅನುಬಂಧ

**ಅಭಿಯೋಜನೆ ಪರ ವಿಚಾರಿಸಲ್ಪಟ್ಟ ಸಾಕ್ಷಿಗಳುಃ**

| | | |
|---|---|---|
| ಫ್ರಾಸಾ–1 | : | ನಾಗಪ್ಪ |
| ಫ್ರಾಸಾ–2 | : | ಮಲ್ಲಿಕಾರ್ಜುನ ಎಂ ಡಿ |
| ಫ್ರಾಸಾ–3 | : | ಶ್ರೀಮತಿ ಶೀಲಾದಾರಾಜ್ಕರ್ |

**ಆರೋಪಿ ಪರ ವಿಚಾರಿಸಲ್ಪಟ್ಟ ಸಾಕ್ಷಿಗಳುಃ**

–ಇಲ್ಲ –

**ಅಭಿಯೋಜನೆ ಪರ ಗುರುತಿಸಲ್ಪಟ್ಟ ದಾಖಲೆಗಳುಃ**

| | | |
|---|---|---|
| ನಿಪಿ–1 | : | ಸ್ಥಳ ಪಂಚನಾಮೆ |
| ನಿಪಿ–1(ಎ,ಬಿ) | : | ಸಹಿ |
| ನಿಪಿ–2 | : | ಫೋಟೋ |
| ನಿಪಿ–3 | : | ಶೋಧನ ಸಮುಚಿತ ಆಧಾರ |
| ನಿಪಿ–3(ಎ) | : | ಸಹಿ |
| ನಿಪಿ–4 | : | ಲಿಸ್ಟ್ ಆಫ್ ಆರ್ಟಿಕಲ್ಸ್ |
| ನಿಪಿ–4(ಎ) | : | ಸಹಿ |
| ನಿಪಿ–5 | : | ಮಾದರಿ ಮೊಹರಿನ ಚೀಟಿ |
| ನಿಪಿ–5(ಎ) | : | ಸಹಿ |

| | | |
|---|---|---|
| ನಿಪಿ–6 | : | ಸ್ವ ಪಿರ್ಯಾದಿ |
| ನಿಪಿ–6(ಎ) | : | ಸಹಿ |
| ನಿಪಿ–7 | : | ಪ್ರಥಮ ವರ್ತಮಾನ ವರದಿ |
| ನಿಪಿ–7(ಎ) | : | ಸಹಿ |
| ನಿಪಿ–8 | : | ಮಾಲುಪಟ್ಟಿ |
| ನಿಪಿ–8(ಎ) | : | ಸಹಿ |
| ನಿಪಿ–9 | : | ಆರ್ ಎಫ್ ಎಸ್ ಎಲ್ ಗೆ ಬರೆದ ಪತ್ರ |
| ನಿಪಿ–9(ಎ) | : | ಸಹಿ |
| ನಿಪಿ–10 | : | ಆರ್ ಎಫ್ ಎಸ್ ಎಲ್ ವರದಿ |
| ನಿಪಿ–10(ಎ) | : | ಸಹಿ |
| ನಿಪಿ–11 | : | ತಹಶೀಲ್ದಾರ್ ರವರಿಗೆ ಬರೆದ ಪತ್ರ |
| ನಿಪಿ–11(ಎ) | : | ಸಹಿ |
| ನಿಪಿ–12 | : | ತಹಶೀಲ್ದಾರ್ ರವರು ನೀಡಿದ ವರದಿ |
| ನಿಪಿ–13 | : | ಅಬಕಾರಿ ವಿಚಾರಣಾ ನೋಟೀಸ್ |
| ನಿಪಿ–13(ಎ) | : | ಸಹಿ |
| ನಿಪಿ–14 | : | ಬಾಡಿಗೆ ಕರಾರು ಪತ್ರ |

ಆರೋಪಿ ಪರ ಗುರುತಿಸಲ್ಪಟ್ಟ ದಾಖಲೆಗಳುಃ

–ಇಲ್ಲ –

ಪ್ರಕರಣದಲ್ಲಿ ಗುರುತಿಸಲ್ಪಟ್ಟ ಮುದ್ದೆ ಮಾಲುಗಳು

ಮು. ಮಾ.1 – ಮದ್ಯದ ಟೆಟ್ರಾ ಪ್ಯಾಕ್ ಗಳು

ಮು. ಮಾ.2 – ಮದ್ಯದ ಬಿಯರ್ ಬಾಟಲ್ ಗಳು

**2 ನೇ ಪ್ರ.ದ.ನ್ಯಾ. ದಂಡಾಧಿಕಾರಿಗಳು, ಶಿವಮೊಗ್ಗ.**